ಕರ್ನಾಟಕ ಸರ್ಕಾರ
**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ**
**ಮಲ್ಲೇಶ್ವರಂ 6ನೇ ಅಡ್ಡರಸ್ತೆ, ಬೆಂಗಳೂರು-03**
Email Id: adpixsection@gmail.com

**ಸಂಖ್ಯೆ:ಎಕ್ಸ್1/ಡ್ರಾ.ಗ್ರೇ.ಪ/ಮೌ.ಮಾ.ನೋಂ/17/2023-24** **ದಿನಾಂಕ: 14/02/2024**

# ಸುತ್ತೋಲೆ

**ವಿಷಯ:** ಡ್ರಾಯಿಂಗ್ ಗ್ರೇಡ್ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯಕ್ಕಾಗಿ ಆನ್‌ಲೈನ್‌ನಲ್ಲಿ ಮೌಲ್ಯಮಾಪಕರ ನೋಂದಣಿ ಮಾಡಿಕೊಳ್ಳುವ ಬಗ್ಗೆ.

**********

ಡ್ರಾಯಿಂಗ್ ಗ್ರೇಡ್ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯಕ್ಕಾಗಿ ಆನ್‌ಲೈನ್‌ನಲ್ಲಿ ಸರ್ಕಾರಿ/ಅನುದಾನಿತ/ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಚಿತ್ರಕಲಾ ಶಿಕ್ಷಕರು ಮೌಲ್ಯಮಾಪನ ಕಾರ್ಯಕ್ಕಾಗಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿಯ ಜಾಲತಾಣದಲ್ಲಿ ಅವಕಾಶ ಕಲ್ಪಿಸಿದೆ.

ಮೌಲ್ಯಮಾಪಕರ ನೋಂದಣಿಗಾಗಿ ಅರ್ಜಿ ಸಲ್ಲಿಸಲು ದಿನಾಂಕ: **20-02-2024** ರಿಂದ ದಿನಾಂಕ: 20-**03-2024** ರವರೆಗೆ ಅವಕಾಶ ನೀಡಲಾಗಿದೆ. ನಿಗದಿತ ದಿನಾಂಕದ ನಂತರ ನೋಂದಣಿಗೆ ಅವಕಾಶವಿರುವುದಿಲ್ಲ.

## ಮೌಲ್ಯಮಾಪಕರ ನೋಂದಣಿಗಾಗಿ ಅರ್ಜಿ ಸಲ್ಲಿಸುವ ಸಂಬಂಧ ಸೂಚನೆಗಳು

ಚಿತ್ರಕಲಾ ಶಿಕ್ಷಕರು ಮಂಡಲಿಯಿಂದ ನೀಡಲಾದ ಲಿಂಕ್ **https://kseeb.karnataka.gov.in/kseabotherexam/** ಬಳಸಿ ನೋಂದಣಿ ಮಾಡಿಕೊಳ್ಳಬೇಕು.

- ಮೌಲ್ಯಮಾಪಕರ ವಯೋಮಿತಿ ಕನಿಷ್ಠ 21 ರಿಂದ ಗರಿಷ್ಠ 59 ವರ್ಷಗಳ ಒಳಗಿರಬೇಕು.
- ಆನ್‌ಲೈನ್ ಮೂಲಕ ಮೌಲ್ಯಮಾಪಕರ ನೋಂದಣಿ ಮಾಡುವ ಸಂದರ್ಭದಲ್ಲಿ ಎಲ್ಲಾ ಅಂಕಣಗಳನ್ನು ಸರಿಯಾಗಿ ಪರಿಶೀಲಿಸಿ ನಮೂದಿಸಬೇಕು.
- ಮೌಲ್ಯಮಾಪಕರ Residential address and Working address ನಮೂದಿಸುವುದು ಕಡ್ಡಾಯವಾಗಿರುತ್ತದೆ.
- ಮೌಲ್ಯಮಾಪಕರ ಭಾವಚಿತ್ರ 60KB ಇಂದ 80KB ಮತ್ತು ಸಹಿ 20KB ಇಂದ 50KB ಗಾತ್ರದಲ್ಲಿ ಇರುವಂತೆ JPEG Format ನಲ್ಲಿ upload ಮಾಡಬೇಕು.
- ಮೌಲ್ಯಮಾಪಕರು ತಮ್ಮ ವಿದ್ಯಾರ್ಹತೆಯ ಪ್ರಮಾಣಪತವನ್ನು PDF ನಲ್ಲಿ (ಗರಿಷ್ಠ 1MB size) ನಲ್ಲಿ UPLOAD ಮಾಡಬೇಕು.
- ಗರಿಷ್ಠ ವಿದ್ಯಾರ್ಹತೆ ಪ್ರಮಾಣಪತ್ರಗಳು ಒಂದಕ್ಕಿಂತ ಹೆಚ್ಚಾಗಿದ್ದಲ್ಲಿ ಎಲ್ಲವನ್ನು ಒಂದು PDF ಮಾಡಿ (ಗರಿಷ್ಠ 1MB size) ನಲ್ಲಿ UPLOAD ಮಾಡಬೇಕು.
- ವಿದ್ಯಾರ್ಹತೆಯ ಪ್ರಮಾಣ ಪತ್ರಗಳನ್ನು ಕರ್ತವ್ಯ ನಿರ್ವಹಿಸುತ್ತಿರುವ ಶಾಲಾ ಮುಖ್ಯ ಶಿಕ್ಷಕರಿಂದ ದೃಢೀಕರಿಸಿ ಮೇಲು ಸಹಿಯೊಂದಿಗೆ UPLOAD ಮಾಡುವುದು ಕಡ್ಡಾಯವಾಗಿರುತ್ತದೆ. ಮೇಲು ಸಹಿ ಇಲ್ಲದ ಪ್ರಮಾಣ ಪತ್ರಗಳನ್ನು ಮಂಡಲಿಯಿಂದ ಅರ್ಜಿ ಅನುಮೋದನೆ ಮಾಡುವ ಸಂದರ್ಭದಲ್ಲಿ ಮಾನ್ಯ ಮಾಡಲಾಗುವುದಿಲ್ಲ.

- ಮೌಲ್ಯಮಾಪಕರ ಮಾಹಿತಿಗಳನ್ನು ಆನ್‌ಲೈನ್‌ನಲ್ಲಿ submit ಮಾಡುವ ಮೊದಲು ಎಲ್ಲಾ ಮಾಹಿತಿಗಳು ಸರಿಯಾಗಿರುವುದರ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿಕೊಳ್ಳುವುದು.
- ಅರ್ಜಿ ಯಶಸ್ವಿಯಾಗಿ ಸಲ್ಲಿಕೆಯಾಗಿರುವ ಬಗ್ಗೆ ಮೌಲ್ಯಮಾಪಕರ ನೋಂದಾಯಿತ ಮೊಬೈಲ್ ಸಂಖ್ಯೆಗೆ SMS ಸಂದೇಶ ರವಾನೆಯಾಗುತ್ತದೆ.
- ಮೌಲ್ಯಮಾಪಕರು ಸಲ್ಲಿಸಿರುವ ಅರ್ಜಿಯು ಮಂಡಲಿಯಿಂದ ಅನುಮೋದನೆಯಾಗಬೇಕಾಗಿದ್ದು ಮಂಡಲಿಯಿಂದ ಅನುಮೋದನೆಗೊಂಡ ನಂತರ ಮೌಲ್ಯಮಾಪಕರ ನೊಂದಾಯಿತ ಮೊಬೈಲ್ ಸಂಖ್ಯೆಗೆ ಅರ್ಜಿ ಯಶಸ್ವಿಯಾದ /ತಿರಸ್ಕೃತಗೊಂಡಿರುವ ಬಗ್ಗೆ SMS ಮೂಲಕ ಮಾಹಿತಿ ರವಾನೆಯಾಗುತ್ತದೆ.
- ಅರ್ಜಿ ಒಂದು ವೇಳೆ ಅರ್ಜಿ ತಿರಸ್ಕೃತಗೊಂಡಿದಲ್ಲಿ ಈ ಬಗ್ಗೆ ಮಾಹಿತಿಯನ್ನು ತಮ್ಮ login ನ Dashboard ನಲ್ಲಿ ಪರಿಶೀಲಿಸಿ ಸರಿಯಾದ ಮಾಹಿತಿಯನ್ನು ಮತ್ತೊಮ್ಮೆ Reupload ಮಾಡಿ Update ಮಾಡಿಕೊಳ್ಳಬಹುದಾಗಿದೆ.
- ಮಂಡಲಿಯಿಂದ ಅರ್ಜಿ ಅನುಮೋದನೆಯಾದ ನಂತರ ಮೌಲ್ಯಮಾಪಕರು ನೋಂದಣಿ ಶುಲ್ಕ ಪಾವತಿಸಲು ಅರ್ಹರಾಗಿರುತ್ತಾರೆ.
- ಎಲ್ಲಾ ಮೌಲ್ಯಮಾಪಕರು ನೋಂದಣಿ ಶುಲ್ಕ ರೂ.500/-ಗಳನ್ನು online ಮೂಲಕ ಪಾವತಿಸುವುದು ಕಡ್ಡಾಯವಾಗಿರುತ್ತದೆ.
- Offline ಮೂಲಕ ಶುಲ್ಕ ಪಾವತಿಸಲು ಅವಕಾಶವಿರುವುದಿಲ್ಲ.
- ಮೌಲ್ಯಮಾಪಕರು ತಮ್ಮ login ಮೂಲಕ online ನಲ್ಲಿ debitcard/credit card / Net Banking ಮೂಲಕ ಶುಲ್ಕ ಪಾವತಿಸುವುದು.
- ತದನಂತರ ಮೌಲ್ಯಮಾಪಕರು ತಮ್ಮ login ನಲ್ಲಿ ಮೌಲ್ಯಮಾಪಕರ ನೋಂದಣಿ ಅರ್ಜಿಯನ್ನು Download ಮಾಡಿಕೊಂಡು ತಮ್ಮ ಶಾಲಾ ಮುಖ್ಯ ಶಿಕ್ಷಕರಿಂದ ದೃಢೀಕರಣ ಮಾಡಿಕೊಳ್ಳುವುದು ಕಡ್ಡಾಯವಾಗಿರುತ್ತದೆ.

**ಚಿತ್ರಕಲಾ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿರುವ ಶಾಲೆಯ ಮುಖ್ಯಸ್ಥರ ಜವಾಬ್ದಾರಿಗಳು :**

- ಶಾಲಾ ಮುಖ್ಯಸ್ಥರು ತಮ್ಮ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಚಿತ್ರಕಲಾ ಶಿಕ್ಷಕರನ್ನು ಕಡ್ಡಾಯವಾಗಿ ನೋಂದಣಿ ಮಾಡಿಸಲು ಕ್ರಮವಹಿಸುವುದು.
- ಮೌಲ್ಯಮಾಪಕರು ನೋಂದಣಿ ಅರ್ಜಿಯನ್ನು Download ಮಾಡಿಕೊಂಡ ನಂತರ ಶಾಲಾ ಮುಖ್ಯ ಶಿಕ್ಷಕರು ದೃಢೀಕರಿಸಿ ಸಂಬಂಧಪಟ್ಟ ಮೌಲ್ಯಮಾಪಕರಿಗೆ ವಿತರಿಸುವುದು ಹಾಗೂ ಒಂದು ಪ್ರತಿಯನ್ನು ಶಾಲಾ ಕಡತದಲ್ಲಿ ಸಂರಕ್ಷಿಸುವುದು.
- ನೋಂದಣಿಯಾದ ಮೌಲ್ಯಮಾಪಕರನ್ನು ಮೌಲ್ಯಮಾಪನ ಕಾರ್ಯಕ್ಕೆ ಆದೇಶ ನೀಡಿದಲ್ಲಿ ನಿಗದಿತ ಸಮಯದಲ್ಲಿ ಕಡ್ಡಾಯವಾಗಿ ಹಾಜರಾಗಲು ಬಿಡುಗಡೆಗೊಳಿಸುವುದು. ಒಂದು ವೇಳೆ ಹಾಜರಾಗದಿದ್ದಲ್ಲಿ ಶಿಸ್ತುಕ್ರಮ ಕೈಗೊಂಡು ಶಾಲಾ ಮುಖ್ಯಸ್ಥರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

## ಮೌಲ್ಯಮಾಪಕರ ನೋಂದಣಿಗಾಗಿ ಅರ್ಜಿ ಸಲ್ಲಿಸುವ ವಿಧಾನ

- ಚಿತ್ರಕಲಾ ಶಿಕ್ಷಕರು ಮಂಡಲಿಯಿಂದ ನೀಡಲಾದ ಲಿಂಕ್ https://kseeb.karnataka.gov.in/kseabotherexam/ ಬಳಸಿ ನೋಂದಣಿ ಮಾಡಿಕೊಳ್ಳಬೇಕು.
- ಮೇಲಿನ ಲಿಂಕ್ ಮೂಲಕ **New Registration for Evaluators** ನಲ್ಲಿ ಕ್ಲಿಕ್ ಮಾಡಿ ಮೌಲ್ಯಮಾಪಕರ ಹೆಸರು, ಜಿಲ್ಲೆ ಮತ್ತು ಮೊಬೈಲ್ ಸಂಖ್ಯೆ ನಮೂದಿಸಿ Submit ಮಾಡಿದಾಗ ನೊಂದಾಯಿತ ಮೊಬೈಲ್ ಸಂಖ್ಯೆಗೆ ಬರುವ OTP ಯನ್ನು ನಮೂದಿಸಿ ಮೌಲ್ಯಮಾಪಕರು Password Set ಮಾಡಿಕೊಳ್ಳಬೇಕು.
- ಮೌಲ್ಯಮಾಪಕರ ನೊಂದಾಯಿತ ಮೊಬೈಲ್ ಸಂಖ್ಯೆಗೆ User Id ಮತ್ತು Password ನ್ನು ರವಾನಿಸಲಾಗುತ್ತದೆ.
- ಇದು ಮೌಲ್ಯಮಾಪಕರ ವೈಯಕ್ತಿಕ login ಆಗಿರುತ್ತದೆ.

- ಮೌಲ್ಯಮಾಪಕರು ಅನಗತ್ಯವಾಗಿ login create ಮಾಡಿಕೊಳ್ಳಬಾರದು.
- ಈಗಾಗಲೇ Offline ಮೂಲಕ ಮೌಲ್ಯಮಾಪಕರಾಗಿ ನೋಂದಣಿ ಮಾಡಿಕೊಂಡು ನೋಂದಣಿ ಸಂಖ್ಯೆ (DRAW...) ಪಡೆದ ಚಿತ್ರಕಲಾ ಶಿಕ್ಷಕರು ಸಹ ಆನ್‌ಲೈನ್ ಮೂಲಕ ಮತ್ತೊಮ್ಮೆ ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ ಹಾಗೂ ಈಗಾಗಲೇ ಪಡೆದಿರುವ (DRAW...) ಹಳೆಯ ನೋಂದಣಿ ಸಂಖ್ಯೆಯನ್ನು ಮೌಲ್ಯಮಾಪನ ಕಾರ್ಯಕ್ಕೆ ಪರಿಗಣಿಸಲಾಗುವುದಿಲ್ಲ.

**ವಿಶೇಷ ಸೂಚನೆ:** ಮೌಲ್ಯಮಾಪಕರ ನೋಂದಣಿಗೆ ಸಂಬಂಧಿಸಿದಂತೆ ವಿವರವಾದ FLOW CHART ನೀಡಿದ್ದು ಇದರಂತೆ Online ಮೂಲಕ ಅರ್ಹ ಮೌಲ್ಯಮಾಪಕರು ನೋಂದಣಿ ಮಾಡಿಕೊಳ್ಳುವುದು

(ಹೆಚ್.ಎನ್. ಗೋಪಾಲಕೃಷ್ಣ)
ನಿರ್ದೇಶಕರು (ಪರೀಕ್ಷೆಗಳು)

ಗೆ,

1. ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರು,ಬೆಂಗಳೂರು/ಮೈಸೂರು/ಬೆಳಗಾವಿ ಮತ್ತು ಕಲಬುರ್ಗಿ ವಿಭಾಗದವರಿಗೆ ಈ ಸುತ್ತೋಲೆಯನ್ನು ಕಳಹಿಸುತ್ತಾ ತಮ್ಮ ವಿಭಾಗದಲ್ಲಿ ಬರುವ ಎಲ್ಲಾ ಚಿತ್ರಕಲಾ ಶಿಕ್ಷಕರಿಗೆ ಮಾಹಿತಿಯನ್ನು ನೀಡಿ ನಿಗದಿಪಡಿಸಿದ ದಿನಾಂಕದೊಳಗೆ ಎಲ್ಲಾ ಶಿಕ್ಷಕರು ನೋಂದಾವಣೆ ಮಾಡಿಕೊಳ್ಳಲು ಅಗತ್ಯ ಕ್ರಮ ವಹಿಸಲು ಸೂಚಿಸಿದೆ.
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು ಆಡಳಿತ ಮತ್ತು ಅಭಿವೃದ್ಧಿ ರವರಿಗೆ ಈ ಸುತ್ತೋಲೆಯನ್ನು ಕಳಹಿಸುತ್ತಾ ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಚಿತ್ರಕಲಾ ಶಿಕ್ಷಕರಿಗೆ ಮಾಹಿತಿಯನ್ನು ನೀಡಿ ನಿಗದಿಪಡಿಸಿದ ದಿನಾಂಕದೊಳಗೆ ಎಲ್ಲಾ ಶಿಕ್ಷಕರು ನೋಂದಾವಣೆ ಮಾಡಿಕೊಳ್ಳಲು ಅಗತ್ಯ ಕ್ರಮ ವಹಿಸಲು ಸೂಚಿಸಿದೆ.
3. ಶಾಖಾಧಿಕಾರಿಗಳು, ಗಣಕಶಾಖೆ ರವರಿಗೆ ಅಗತ್ಯ ಕ್ರಮ ವಹಿಸಲು ಸೂಚಿಸಿದೆ.

**ಪ್ರತಿಯನ್ನು ಗೌರವಪೂರ್ವಕವಾಗಿ ಮಾಹಿತಿಗಾಗಿ:**

1. ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ರವರಿಗೆ.
2. ಮಾನ್ಯ ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರಗಿ ರವರಿಗೆ.

# KARNATAKA EXAMINATION AND ASSESSMENT BOARD

## 6th Cross, Malleswaram, Bengaluru – 560 003

**FLOW CHART**

**FLOW CHART FOR EVALUATOR'S REGISTRATION FOR DRAWING GRADE EXAMINATION**

**https://kseeb.karnataka.gov.in/kseabotherexam/**

**Click on New Registration for Evaluators**

↓

Enter Name

↓

Enter Mobile Number

↓

Select District

↓

Submit

↓

Get OTP

↓

Enter OTP

↓

Submit

↓

Set New Password

↓

Save

↓

Click on login Page

↓

Enter user Id

↓

Enter Password

↓

Login

↓

**Click on Evaluator's Registration Form**

↓

**Fill the Basic Details**

(Evaluator's Name,DOB,Gender,Physical Condition,Residential Address, District, Pincode, Present Working Address etc..,)

↓

Enter Date of Entry into service

↓

Enter General Qualification

↓

Enter Professional Qualification

↓

Enter Bank Account Details

(Bank Account Number,IFSC Code,PAN Number)

↓

Enter Email Id

↓

Enter Mobile Number

↓

Enter OTP

↓

Upload the Candidate photo (60-80kb in jpeg format)

↓

Upload the Candidate Signature (20-50kb in jpeg format)

↓

Upload the Qualification Certificate

↓

Declare

↓

Save and Get Application No

↓

Wait for the Approval by KSEAB

**Note:**

After Approval of the Application by KSEAB, Drawing Grade Section Evaluator can make the payment in the login and can download Acknowledgement form from the same login.